ಇನಿಂಗ್ಸ್‌ನಲ್ಲಿ ಅವರಿಂದ ಸಹ ಆಟಗಾರರು ಏನೆಲ್ಲ ಕಲಿತರು, ಕಲಿಯುತ್ತಿದ್ದಾರೆನ್ನುವುದು ಮುಂದಿನ ಪಂದ್ಯಗಳಲ್ಲಿ ಎದ್ದುಕಂಡಿತು. ಕರ್ನಾಟಕದ ಎದುರು 100 ರನ್‌ಗಳ ಒಳಗೇ ಮೊದಲ ಇನಿಂಗ್ಸ್‌ನಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಸೌರಾಷ್ಟ್ರ ಹೇಗೆ ಪುಟಿದೆದ್ದು, ಫೈನಲ್ ತಲುಪಿತು ಎನ್ನುವ ಉದಾಹರಣೆ ಎದುರಲ್ಲೇ ಇದೆ.

ಆಂಧ್ರ ಎದುರಿನ ಪಂದ್ಯದಲ್ಲಿನ ಆಟದಲ್ಲೇ ಪೂಜಾರ ಭಾರತದಲ್ಲಿ ಆಡಿದ ಪ್ರಥಮ ದರ್ಜೆ ಪಂದ್ಯಗಳಲ್ಲಿ 12 ಸಾವಿರ ರನ್‌ಗಳ ಮೈಲಿಗಲ್ಲು ದಾಟಿದರು. ಬೇರೆ ದೇಶಗಳ ಕೌಂಟಿ ತಂಡಗಳ ಪರವಾಗಿಯೂ ಅವರು ಆಡಿರುವ ಪಂದ್ಯಗಳ ರನ್ ಗಳಿಕೆಯನ್ನು ಸೇರಿಸಿಕೊಂಡರೆ ಪ್ರಥಮ ದರ್ಜೆ ಪಂದ್ಯಗಳ ಒಟ್ಟಾರೆ ರನ್ ಗಳಿಕೆಯು 18 ಸಾವಿರ ಗಡಿಯನ್ನೂ ಮೀರಿದೆ.

ಕೋವಿಡ್ ಬಂದಮೇಲೆ ಹಾಗೂ ಅದಕ್ಕೂ ಒಂದು ವರ್ಷ ಮುಂಚೆ ಚೇತೇಶ್ವರ ಪೂಜಾರ ಟೆಸ್ಟ್ ಕ್ರಿಕೆಟ್‌ನಲ್ಲಿ ರನ್ ಗಳಿಸಲು ಪರದಾಡುತ್ತಿದ್ದರು. ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಂತರೂ ರನ್ ಗಳಿಕೆ ಅವರಿಗೆ ಸುಲಭವಾಗಿರಲಿಲ್ಲ. ಮೊದಲಿನಷ್ಟು ಲೀಲಾಜಾಲವಾಗಿ ಆಡಲು ಆಗುತ್ತಿರಲಿಲ್ಲ. ಆ ಕೊರತೆಯನ್ನು ತಲೆಯೊಳಗೆ ತುಂಬಿಕೊಂಡು ಅವರು ಸುಮ್ಮನೆ ಕೂರುವ ಜಾಯಮಾನದವರಲ್ಲ. ಕಳೆದ ವರ್ಷ ನಡುಘಟ್ಟದಲ್ಲಿ ಸಸೆಕ್ಸ್ ಕೌಂಟಿ ತಂಡದ ಪರವಾಗಿ ಅವರು ಹಂಗಾಮಿ ನಾಯಕನ ಜವಾಬ್ದಾರಿ ನಿರ್ವಹಿಸಬೇಕಾಯಿತು. ಮಿಡ್ಲ್‌ಸೆಕ್ಸ್ ವಿರುದ್ಧದ ಪಂದ್ಯದಲ್ಲಿ ದ್ವಿಶತಕ ಗಳಿಸಿದರು. ಅದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರ 16ನೇ ದ್ವಿಶತಕ. 498 ನಿಮಿಷಗಳ ಆ ಇನಿಂಗ್ಸ್‌ನಲ್ಲಿ 368 ಎಸೆತಗಳನ್ನು ಆಡಿದಮೇಲೆ ಅವರು ದ್ವಿಶತಕದ ಗಡಿ ದಾಟಿದ್ದು. 6, ಔಟಾಗದೆ 201, 109, 12, 203 ಹಾಗೂ ಔಟಾಗದೆ 170 – ಇವು ಕಳೆದ ವರ್ಷ ಕೌಂಟಿ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ನೆಲದಲ್ಲಿ ಅವರು ರಾಶಿ ಮಾಡಿಟ್ಟ ರನ್‌ಗಳ ಬಿಡಿ ಬಿಡಿ ಮಾಹಿತಿ.

ಸಸೆಕ್ಸ್ ಪರವಾಗಿ ಆಡಿದಾಗ ಅವರ ರನ್ ಗಳಿಕೆಯ ಹಸಿವು ಎಷ್ಟಿತ್ತು ಎಂದರೆ ಸ್ಟ್ರೈಕ್‌ರೇಟ್ ಕೂಡ ಅವರ ಜಾಯಮಾನಕ್ಕೆ ಮೀರಿದಂತೆ ಹೆಚ್ಚಾಗಿತ್ತು. ಅದನ್ನೇ ಕಳೆದ ವರ್ಷ ಡಿಸೆಂಬರ್‌ನಲ್ಲಿ ಬಾಂಗ್ಲಾದೇಶದ ಎದುರಿನ ಪಂದ್ಯದಲ್ಲೂ ಮುಂದುವರಿಸಿದರು. 130 ಎಸೆತಗಳಲ್ಲಿ ಇನಿಂಗ್ಸ್ ಒಂದರಲ್ಲಿ ಅವರು ಶತಕ ಗಳಿಸಿ ಬ್ಯಾಟ್ ಮೇಲೆತ್ತಿದಾಗ, ಪೂಜಾರ ಮೈಮೇಲೆ ಏನು ಬಂದಿದೆಯೋ ಎಂದು ಉದ್ಗಾರ ತೆಗೆದವರೂ ಇದ್ದರು. 78.46ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಟೆಸ್ಟ್‌ನಲ್ಲಿ ಶತಕ ಗಳಿಸುವುದೆಂದರೆ ಅತ್ಯಪರೂಪ. ಅದು ಅವರ ವೃತ್ತಿಪರ ಟೆಸ್ಟ್ ಕ್ರಿಕೆಟ್ ಬದುಕಿನ ಅತಿ ವೇಗದ ಶತಕವೂ ಹೌದು.



ಪೂಜಾರ ತಾಂತ್ರಿಕವಾಗಿ ಎಷ್ಟು ಜಾಣರೆನ್ನುವುದಕ್ಕೆ ದೆಹಲಿಯಲ್ಲಿ ಆಸ್ಟ್ರೇಲಿಯಾ ಎದುರು ಮೊನ್ನೆ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯ ಶುರುವಾಗುವ ಮುನ್ನಾದಿನಗಳ ಅಭ್ಯಾಸದ ಪ್ರಸಂಗವೊಂದನ್ನು ಗಮನಿಸಬೇಕು. ಇದನ್ನು ಕೆಲವು ಮಾಧ್ಯಮಗಳು ವಿವರಣೆಯೊಂದಿಗೆ ವರದಿ ಮಾಡಿದವು. ಆರ್. ಅಶ್ವಿನ್ ಟೆಸ್ಟ್ ಕ್ರಿಕೆಟ್‌ನಲ್ಲಿ ಸಲೀಸಾಗಿ 100 ಬಾರಿ ಎಲ್‌ಬಿ ಬಲೆಗೆ ಕೆಡವಿ, ಬ್ಯಾಟ್ಸ್‌ಮನ್‌ಗಳು ಕಕ್ಕಾಬಿಕ್ಕಿಯಾಗುವಂತೆ ಮಾಡಿದವರು. ದೆಹಲಿಯಲ್ಲಿ ನೆಟ್ಸ್ ಅಭ್ಯಾಸದ ವೇಳೆ ಅವರು ಪೂಜಾರ ಅಭ್ಯಾಸ ಮಾಡುವಾಗ ಗಂಭೀರವಾಗಿ ಅಪೀಲ್ ಮಾಡಿದರು. ಬೌಲಿಂಗ್ ಪಾಠ ಹೇಳುತ್ತಿದ್ದ ಸಾಯಿರಾಜ್ ಬಹುತುಲೆ, 'ಅದು ಔಟ್ ಅಲ್ಲ, ಚೆಂಡು ವಿಕೆಟ್‌ನ ಲೈನ್‌ನಲ್ಲಿ ಇರಲಿಲ್ಲ' ಎಂದು ಸ್ಪಷ್ಟನೆ ಕೊಟ್ಟರು. ಚೆಂಡು ಬೀಳುವ ಜಾಗ ಹಾಗೂ ವಿಕೆಟ್‌ಗಳಿರುವ ದಿಕ್ಕಿನಿಂದ ಅದು ಎಲ್ಲಿದೆ ಎನ್ನುವುದನ್ನು ಪೂಜಾರ ಕರಾರುವಾಕ್ಕಾಗಿ ಅಂದಾಜು ಮಾಡುತ್ತಾರೆ ಎನ್ನುವುದನ್ನು ಇದೇ ಅಶ್ವಿನ್ ಎಷ್ಟೋ ಸಲ ಅನುಮೋದಿಸಿದ್ದಾರೆ. ಅಕ್ಷರ್ ಪಟೇಲ್ ಕೂಡ ನೆಟ್ಸ್ ಅಭ್ಯಾಸದ ವೇಳೆ ಪೂಜಾರ ಅವರಿಗೆ ಎಸೆತ ಹಾಕಿ, ಎಲ್‌ಬಿ ಅಪೀಲು ಮಾಡಿದರು. ಅದಕ್ಕೂ ಸಾಯಿರಾಜ್, 'ಔಟ್ ಅಲ್ಲ' ಎಂದು ಹೇಳಿದರು. ಬ್ಯಾಟ್, ಪ್ಯಾಡ್ ಎರಡನ್ನೂ ಬಹಳ ಹತ್ತಿರಕ್ಕೆ ತಂದು ಆಡುವ ಪೂಜಾರ ಜಾಣ್ಮೆ ಅಂಪೈರ್‌ಗಳ ತಾದಾತ್ಮ್ಯವನ್ನೂ ನಿಕಷಕ್ಕೆ ಒಡ್ಡುತ್ತದೆನ್ನುವುದಕ್ಕೆ ಇದೇ ಸಾಕ್ಷಿ.

ಸ್ಪಿನ್ನರ್‌ಗಳ ಎಸೆತಗಳನ್ನು ಪೂಜಾರ ಎಷ್ಟು ಆತ್ಮವಿಶ್ವಾಸದಿಂದ ಆಡುತ್ತಾರೆಂದರೆ, ಆಸ್ಟ್ರೇಲಿಯಾದ ನೇಥನ್ ಲಿಯಾನ್ ತಮ್ಮದೇ ಅನುಭವದ ಮೂಲಕ ಇದನ್ನು ಬಣ್ಣಿಸಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಪೂಜಾರ ಅವರಿಗೆ 1158 ಎಸೆತಗಳನ್ನು ಲಿಯಾನ್ ಇದುವರೆಗೆ (ಇದೇ ಫೆಬ್ರುವರಿಯಲ್ಲಿ ನಡೆದ ಮೊದಲ ಟೆಸ್ಟ್‌ವರೆಗೆ) ಬೌಲ್ ಮಾಡಿದ್ದಾರೆ. ಹತ್ತು ಸಲ ಔಟ್ ಕೂಡ ಮಾಡಿದ್ದಾರೆ. ಆದರೆ, ಎಲ್‌ಬಿ ಬಲೆಗೆ ಕೆಡವಲು ಸಾಧ್ಯವಾಗಿರುವುದು ಒಮ್ಮೆ ಮಾತ್ರ.

ಪೂಜಾರ ತರಹದ ಆಟ ಈ ಕಾಲದವರ ಆಟದ ಜಾಯಮಾನಕ್ಕೆ ಸಂಪೂರ್ಣ ತದ್ವಿರುದ್ಧವಾದದ್ದು. ಅವರು ಬೌಲರ್‌ಗಳಿಗೆ ನೆರವಾಗುವ ಪಿಚ್‌ನಲ್ಲಿ ಪ್ರಯೋಗಕ್ಕೆ ಕೈಹಾಕುವುದೇ ಇಲ್ಲ. ವೇಗದ ಬೌಲರ್‌ಗಳಿಗೆ ಉತ್ತಮ ಬೌನ್ಸ್ ಸಿಗುವ ಕಡೆ ತಲೆತಗ್ಗಿಸಿ ನಿಲ್ಲುತ್ತಾರೆಯೇ ವಿನಾ ಪುಲ್‌ಗಳನ್ನು ಅಥವಾ ಹುಕ್‌ಗಳನ್ನು ಮಾಡುವ ಗೊಡವೆಗೆ ಹೋಗುವುದಿಲ್ಲ. ಸಾಮಾನ್ಯವಾಗಿ ನಾವು ಬ್ಯಾಟಿಂಗ್ ಬಲವನ್ನು ಬಣ್ಣಿಸುವಾಗ ಅವರು ಹೊಡೆಯುವ ಡ್ರೈವ್‌ಗಳ ಗುಣಮಟ್ಟದಿಂದ ಸಾಮರ್ಥ್ಯಕ್ಕೆ ಒತ್ತು ಕೊಡುತ್ತೇವೆ. ಪೂಜಾರ ವಿಷಯದಲ್ಲಿ ಹೀಗೆ ಹೇಳುವ ಹಾಗಿಲ್ಲ. ಗಂಟೆಗಟ್ಟಲೆ ಬೌಂಡರಿ ಹೊಡೆಯದೇ ಗಟ್ಟಿಯಾಗಿ ನಿಂತು, ಬೌಲರ್‌ಗಳ ಗೋಳುಹೊಯ್ದುಕೊಳ್ಳುವ ಪರಿಗೆ ಸರಿಸಾಟಿ ಯಾರಿಹರು ಎನ್ನಬೇಕು. ಹಿಂದೆ ರಾಹುಲ್ ದ್ರಾವಿಡ್ ಅವರೂ ಟೆಸ್ಟ್ ಕ್ರಿಕೆಟ್‌ನಲ್ಲಿ ಈ ರೀತಿ ಆಡಿ ಎದುರಾಳಿಗಳನ್ನು ಕಾಡುತ್ತಿದ್ದರು.

8, 15, 4, ಔಟಾಗದೆ 12, 9, 45, 1, 91, 4, 61, 26, 22, 0, 0, 16, 3, 53, 43, 9, 13, 66, 90 , ಔಟಾಗದೆ 102, 24, 6, 7... ಕಳೆದ ಹತ್ತು ಟೆಸ್ಟ್‌ಗಳಲ್ಲಿ ಪೂಜಾರ ಗಳಿಸಿದ ಸ್ಕೋರ್ ಹೀಗಿದೆ. ಇದನ್ನು ನೋಡಿದರೆ, ಅವರನ್ನು ತಂಡದಿಂದ ಕೈಬಿಡುವುದು ಹೇಗೆ ತಾನೆ ಸಾಧ್ಯ?

ಪ್ರತಿಕ್ರಿಯಿಸಿ: feedback@sudha.co.in